ಮಾಡುತ್ತಿದ್ದ. ಆದರೆ, ಚಿಕ್ಕಮ್ಮ ಸಬ್ಸಿಡಿ ಸಾಲದ ಫಲಾನುಭವಿಯಾದುದರಿಂದ ಒಂದು ರೂಪಾಯಿ ಕೂಡ ಕಡಿಮೆ ಮಾಡಲಿಲ್ಲ. ಯಾವುದೋ ದೇಶದ ಯಾವುದೋ ವಾತಾವರಣಕ್ಕನುಗುಣವಾಗಿ ಸೃಷ್ಟಿಯಾಗಿದ್ದ ಎಚ್‌ಎಫ್ ಮತ್ತು ಜರ್ಸಿ ಹಸುಗಳು ಎಲ್ಲಿ ನೋಡಿದರಲ್ಲಿ ಉರಿ ಬಿಸಿಲಲ್ಲಿ ಏದುಸಿರು ಬಿಡುತ್ತ ಬಿಕರಿಯಾಗುತ್ತ ನಿಂತಿದ್ದವು. ಕೆಲವು ಹಸುಗಳ ವ್ಯಾಪಾರ ಚೌಕಾಸಿಯ ಹಂತದಲ್ಲಿ ಸ್ಥಗಿತಗೊಂಡಿತ್ತು. ಮತ್ತೆ ಕೆಲವು ವ್ಯಾಪಾರವಾಗಿ ರವಾನೆಯಾಗುವ ಗಳಿಗೆಗೆ ಕಾಯುತ್ತಿದ್ದವು. ಕೆಲವು ಮತ್ತೆ ಮತ್ತೆ ಕೆಚ್ಚಲು ಪರೀಕ್ಷೆ, ಗರ್ಭ ಪರೀಕ್ಷೆಗೊಳಪಟ್ಟು ಹೈರಾಣಾಗಿದ್ದವು. ತಮ್ಮನ್ನು ಖರೀದಿಸಿದ ರೈತರ ಮನೆ ತಲುಪಲು ಅವು ಒಂದೆರಡು ದಿನ ಲಾರಿಯಲ್ಲಿ ಇಕ್ಕಟ್ಟಿನಲ್ಲಿ ಪ್ರಯಾಣಿಸಬೇಕಾಗಿತ್ತು. ಇದೆಲ್ಲ ಇತಿಹಾಸದಲ್ಲಿ ಆಗಿ ಹೋಗಿದ್ದ ಗುಲಾಮರ ವ್ಯಾಪಾರವನ್ನು ನೆನಪಿಗೆ ತರುವಂತಿತ್ತು.

ಡಾಕ್ಟ್ರು ಹಸು ಕಿವಿಗೆ ವಾಲೆ ಹಾಕಿ, ಹಸುವಿನ ಚಹರೆಗಳನ್ನು ಬರೆದು ದೃಢೀಕರಣ ಪತ್ರ ಸಿದ್ಧ ಮಾಡಿದರು. ಬ್ಯಾಂಕ್ ಸಿಬ್ಬಂದಿ ತಲುಪಿಸಬೇಕಾದವರಿಗೆ ದುಡ್ಡು ತಲುಪಿಸಿದರು. ಲೋನ್ಲಿಂಗ ಮೊದಲೇ ತಿಳಿಸಿದಂತೆ ಮ್ಯಾನೇಜರ್ ಮತ್ತು ಡಾಕ್ಟ್ರಿಗೆ ಒಂದೊಂದು ಸಾವಿರ ರೂಪಾಯಿ ಫೀಸ್ ಹೆಸರಲ್ಲಿ ಲಂಚ ಚಿಕ್ಕಮ್ಮನಿಂದ ಸಂದಾಯವಾಯಿತು. ಹೀಗೆ ಖರೀದಿಸಿದ ಹಸುಗಳಿಗೆ ಮೂರು ವರ್ಷಗಳ ಕಾಲ ವಿಮೆ ಇರುತ್ತದೆಂದು, ಅವಧಿಯೊಳಗೆ ಹಸುಗಳು ಮರಣ ಹೊಂದಿದರೆ ವಿಮೆಯ ಮೊತ್ತವು ವಿಮಾ ಕಂಪನಿಯಿಂದ ಹಸು ಮಾಲೀಕರಿಗೆ ಬರುತ್ತದೆಂದು ತಿಳಿಸಿದರು. ಇದೇ ರೀತಿ ಮಿಕ್ಕ ಫಲಾನುಭವಿಗಳ ಹಸುಗಳು ಖರೀದಿಯಾಗಿ ಮರುದಿನ ಮಧ್ಯ ರಾತ್ರಿ ಲಾರಿ ಸೋಪನಹಳ್ಳಿಗೆ ವಾಪಸಾಯಿತು. ಲಾರಿಯವನಿಗೆ ಬಾಡಿಗೆ ಚುಕ್ತಾ ಮಾಡಿ ಹಸುಗಳನ್ನು ಕೆಳಗಿಳಿಸಿಕೊಳ್ಳಲಾಯಿತು. ಮೂರು ಸಾವಿರ ರೂಪಾಯಿಗಳು ಲಾರಿ ಬಾಡಿಗೆಯೆಂದು ಚಿಕ್ಕಮ್ಮನ ಕೈಬಿಟ್ಟವು. ಮರುದಿನ ಬ್ಯಾಂಕಿನವರು ಹಸುವಿನ ಮೂರು ವರ್ಷದ ವಿಮಾ ಕಂತಿನ ಬಾಬ್ತು ಆರು ಸಾವಿರ ರೂಪಾಯಿ ಎಂದು ತಿಳಿಸಿ ಸಾಲದ ಲೆಕ್ಕಕ್ಕೆ ಸೇರಿಸಿದರು.

ಆದ ಖರ್ಚನ್ನೆಲ್ಲ ಮರೆತು ತಮ್ಮ ಕೊಟ್ಟಿಗೆ ಸೇರಿದ್ದ ಭಾರೀ ಗಾತ್ರದ ಎಚ್‌ಎಫ್ ಹಸುವನ್ನು ಚಿಕ್ಕಮ್ಮನ ಮನೆಯವರು ಹೊಸ ಅಳಿಯನಂತೆ ನೋಡಿಕೊಳ್ಳತೊಡಗಿದರು. ದಿನವಿಡೀ ಚಿಕ್ಕಮ್ಮ, ಲೋಕಿ ಅಥವಾ ವಿಜಯಮ್ಮ ಒಬ್ಬರಲ್ಲಾ ಒಬ್ಬರು ನೋಡಿಕೊಳ್ಳುತ್ತಿದ್ದರು. ಅದರ ಮೈ ತೊಳೆಯೋದು, ಹಿಂಡಿ ಬೂಸಾ ಒಣಮೇವು

